ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ 622/2024

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಪ್ರೇಮಲತಾ
ಗಂಡನ ಹೆಸರು :- ಅನಂತರಾಜು
ವಯಸ್ಸು :- 60 ವರ್ಷ
ಉದ್ಯೋಗ :- ಖಾಸಗಿ ಕೆಲಸ
ವಾಸ :- ತುಮಕೂರು

**ಸಾಕ್ಷಿಗೆ ದಿಃ 07.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಕಿಚ್ಚಾವಾಡಿ ಗ್ರಾಮದ ನನ್ನ ಗಂಡ ಅನಂತರಾಜು ಅವರಿಗೆ ಸೇರಿದ ಜಮೀನು ಇದ್ದು ಅದರ ಸರ್ವೆ ನಂ 52/3 ಆಗಿದ್ದು ಅದರಲ್ಲಿ 6 ಗುಂಟೆ ಜಮೀನು ಇರುತ್ತದೆ ಸದರಿ ಜಮೀನು ನನ್ನ ಗಂಡನಿಗೆ ಅವರ ತಾಯಿಯಿಂದ ಬಂದಿರುತ್ತದೆ. ಈಗ ನನ್ನ ಗಂಡ ಮರಣ ಹೊಂದಿರುತ್ತಾರೆ. 11.01.2011 ರಲ್ಲಿ ನನ್ನ ಮರಣ ಹೊಂದಿರುತ್ತಾರೆ. ಸದರಿ ಜಮೀನನ್ನು ನನ್ನ ಗಂಡ ಯಾರಿಗೂ ಮಾರಾಟ ಮಾಡಿರುವುದಿಲ್ಲ. ನನ್ನ ಗಂಡನ ಮರಣಾ ನಂತರ ದಾಖಲಾತಿಯನ್ನು ತಗೆಸಲು ಹು.ದುರ್ಗ ಉಪ ನೊಂದಣಿ ಕಚೇರಿಗೆ ಹೋಗಿದ್ದು ಆ ಸಮಯದಲ್ಲಿ ನಮಗೆ 2021 ನವಂಬರ 11 ರಲ್ಲಿ ಆರೋಪಿ ಸೇರಿಗೆ ಆಗಿರುವುದು ಕಂಡು ಬಂದಿರುತ್ತದೆ.

ನಂತರ ನಾನು ದಿನಾಂಕ 31.12.2021 ರಂದು ಹು.ದುರ್ಗ ಪೊ. ಠಾಣೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ಪೂರ್ಜರಿ ಮಾಡಿಕೊಂಡು ಅವರ ಹೆಸರಿಗೆ ಜಮೀನು

ಮಾಡಿಕೊಂಡಿದ್ದಾರೆಂದು ದೂರನ್ನು ನೀಡಿರುತ್ತೇನೆ. ದಿನಾಂಕ 03.01.2022 ರಂದು ಪೋಲಿಸರು ಹು.ದುರ್ಗ ಉಪ ನೊಂದಣಾ ಕಚೇರಿಯಲ್ಲಿ ಚಾಸಾ 6 ಮತ್ತು 7 ಹಾಗೂ ನಾನು ಇದ್ದೇನು. ಮದ್ಯಾಹ್ನ 12.30 ಗಂಟೆಗೆ ಮಹಜರ ಮಾಡಿರುತ್ತಾರೆ ಸದರಿ ಮಹಜರಗೆ ನನ್ನ ಸಹಿ ಇರುತ್ತದೆ.

**ಈ ಹಂತದಲ್ಲಿ ದಿನಾಂಕ ವ್ಯತ್ಯಾಸ ಇದ್ದ ಕಾರಣ ಮಾನ್ಯ ಸ.ಸ.ಅ ರವರು ಮುಂದುವೆರದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮೂಂದುಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.